

## ಸಲ್ಲೂ- ಕತ್ರೀನಾ ಹಾಡು

‘ಟೈಗರ್ ಜಿಂದಾ ಹೈ’ ಚಿತ್ರಕ್ಕಾಗಿ ಆಸ್ಟ್ರಿಯಾದಲ್ಲಿ ಮೈನಸ್ 5 ಡಿಗ್ರಿಯ ಕಡುಚಳಿಯ ವಾತಾವರಣದಲ್ಲಿ ಸಲ್ಮಾನ್ ಖಾನ್ ಮತ್ತು ಕತ್ರೀನಾ ಕೈಫ್ ಬೆಚ್ಚನೆಯ ಭಾವ ಉದ್ದೀಪಿಸುವ ಪ್ರೇಮಗೀತೆಯೊಂದನ್ನು ಹಾಡಿದರಂತೆ. ಒಂದು ಕಾಲದಲ್ಲಿ ಬಾಲಿವುಡ್‌ನ ಅತ್ಯಂತ ಯಶಸ್ವಿ ಜೋಡಿಯಾಗಿದ್ದ ಸಲ್ಲೂ ಮತ್ತು ಕತ್ರೀನಾ, ಐದು ವರ್ಷಗಳ ಬಳಿಕ ಜತೆಯಾಗಿ, ‘ದಿಲ್ ದಿಯಾ ಗಲ್ಲಾನ್’ ಎನ್ನುವ ಈ ಯುಗಳಗೀತೆ ಹಾಡಿದ್ದಾರೆ. ಭಾರತ ಮತ್ತು ಪಾಕಿಸ್ತಾನದ ಇಬ್ಬರು ಗೂಢಚಾರರ ನಡುವಣ ಪ್ರೇಮಕಥೆಗೆ ಈ ಚಿತ್ರದಲ್ಲಿ ಹೊಸ ಟ್ವಿಸ್ಟ್ ಸಿಕ್ಕಿದೆಯಂತೆ. ಬಹುತೇಕ ಚಿತ್ರ ಡಿಸೆಂಬರ್ ಮೂರನೇ ವಾರದಲ್ಲಿ ತೆರೆಗೆ ಬರಲಿದೆ. ಸಲ್ಮಾನ್ ಅಭಿಮಾನಿಗಳು ಈ ಚಿತ್ರವನ್ನು ಕಾತರದಿಂದ ಕಾಯುತ್ತಿದ್ದಾರೆ.



## ಅನೂಷ್ಕಾ ಮದುವೆ

ಅನೂಷ್ಕಾ – ವಿರಾಟ್ ಕೊಹ್ಲಿ ಮದುವೆ ಮುಗಿದಿದೆ. ಅದೂ ದೂರದ ಇಟಲಿಯ ಟುಸ್ಕಾನಿಯಲ್ಲಿ. ಮಾಧ್ಯಮದವರ ಕಣ್ಣು ತಪ್ಪಿಸಿ ಬಹುದೂರದ ಇಟಲಿಯ ಪ್ರಕೃತಿಯ ರಮ್ಯ ತಾಣದಲ್ಲಿ ನಡೆದ ಮದುವೆಯಲ್ಲಿ ಅತ್ಯಂತ ನಿಕಟ ಸಂಬಂಧಿಕರು ಮತ್ತು ಮಿತ್ರರು ಮಾತ್ರ ಪಾಲ್ಗೊಂಡಿದ್ದರು. ಒಟ್ಟು ಸೇರಿದ್ದು ಕೇವಲ 44 ಮಂದಿಯಂತೆ.

ಭಾರೀ ಪಂಜಾಬಿ ಮದುವೆಯೊಂದು ಇಷ್ಟೊಂದು ಸರಳವಾಗಿ ನಡೆಯಬಹುದೆ... ಎಂದು ಬಾಲಿವುಡ್ ಮಂದಿ ಅಚ್ಚರಿಯಿಂದ ಮೂಗಿನ ಮೇಲೆ ಬೆರಳಿಟ್ಟಿದ್ದಾರೆ. ಅಂದ ಹಾಗೆ ಈ ಬಹುದೂರದ ತಾಣವನ್ನು ತೋರಿಸಿಕೊಟ್ಟದ್ದು ಆದಿತ್ಯ ಚೋಪ್ರಾ ಅಂತೆ. ಆದಿತ್ಯ ಕೂಡಾ ರಾಣಿ ಮುಖರ್ಜಿಯನ್ನು ಹೀಗೆಯೇ ದೂರದ ಇಟಲಿಯಲ್ಲೇ ಮದುವೆಯಾದದ್ದು. ಆದಿತ್ಯ ಚೋಪ್ರಾ ನಿರ್ಮಾಣದ ‘ರಬ್ ನೆ ಬನಾ ದಿ ಜೋಡಿ’ ಚಿತ್ರದಲ್ಲಿ ಹೀರೋಯಿನ್ ಆಗಿ ಅನೂಷ್ಕಾ ಬಹುದೊಡ್ಡ ಹೆಸರು ಗಳಿಸಿದಾಕೆ. ಮಾತ್ರವಲ್ಲ ಆದಿಯ ವೈಆರ್‌ಎಫ್ ಬ್ಯಾನರ್‌ನ ಐದಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದಾಳೆ. ಹಾಗೆ ಇಬ್ಬರ ನಡುವೆ ಬೆಳೆದ ಮಿತ್ರತ್ವದಿಂದಾಗಿಯೇ ಆದಿತ್ಯ ಸೂಚಿಸಿದ ಗುಟ್ಟಿನ ತಾಣ ಆಯ್ಕೆಯಾಯಿತಂತೆ.

■ ಬಿಂದು